1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ 1110/2023 cw3 pw2

ಸಾಕ್ಷಿದಾರರ ಹೆಸರು ಃ ಅವಿನಾಶ್ ಕೆ ಆರ
ತಂದೆಯ ಹೆಸರು ಃ ಲೇಟ್ ರಾಮಚಂದ್ರು ಕೆ ಕೆ
ವಯಸ್ಸು ಃ 36
ಉದ್ಯೋಗ ಃ ಅಬಕಾರಿ ಪೇದೆ
ವಾಸ ಃ ಮಂಡ್ಯ

ಸಾಕ್ಷಿಯನ್ನು ದಿನಾಂಕಃ-07.11.2025 ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

ನಾನು ದಿಃ 2019 ರಿಂದ 2023 ರವರೆಗೆ ಮಳವಳ್ಳಿ ಅಬಕಾರಿ ಠಾಣೆಯಲ್ಲಿ ಅಬಕಾರಿ ಪೇದೆ ಆಗಿ **ಕರ್ತವ್ಯ ನಿರ್ವಹಿಸಿದ್ದೆನು.**

1. ದಿಃ **14.09.2022** ರಂದು ಚಾಸ **1** ರವರ ಜೊತೆ ಸರ್ಕಾರಿ ವಾಹನ ಸಂ.ಕೆಎ **11** ಜಿ **704** ಮಹೇಂದ್ರು ಬುಲೆರೊ ದಲ್ಲಿ ಸಿಬ್ಬಂದಿಯೊಂದಿಗೆ ಮಳವಳ್ಳಿ ಹಿಟ್ಟನಹಳ್ಳಿ ಕೊಪ್ಪಲು ರಸ್ತೆಯ ಆಲದ ಗೇಟು ಬಳಿ ಮದ್ಯಾಹ್ನ **3** ಗಂಟೆಗೆ ಗಸ್ತು ನಡೆಸುತ್ತಿರುವಾಗ ಮಳವಳ್ಳಿ ಕಡೆಯಿಂದ ಒಬ್ಬ ದ್ವಿಚಕ್ರ ಸವಾರನು ಪೆಟೊರಲ್ ಟ್ಯಾಂಕು ಮೇಲೆ ಒಂದು ಬಿಳಿ ಪ್ಲಾಸ್ಟಿಕ್ ಚೀಲ ಇಟ್ಟುಕೊಂಡು ಬರುತ್ತಿದ್ದು ಆತ ಮಂಡ್ಯ ರಸ್ತೆಯ ತಿರುವಿನಲ್ಲಿ ನಿಲ್ಲಿಸಿರುತ್ತಾನೆ. ಏನನ್ನು ಸಾಗಣೆ ಮಾಡುತ್ತಿದ್ದಿಯ ಕೇಳಲಾಗಿ ಸಮಂಜಸ ಉತ್ತರ ನೀಡಲಿಲ್ಲ. ಅದೇ ರಸ್ತೆಯಲ್ಲಿ ಹೋಗುತ್ತಿದ್ದ ಸಾರ್ವಜನಿಕರನ್ನು ಬರಮಾಡಿಕೊಂಡು ಪಂಚರಾಗುವಂತೆ ಕೇಳಿಕೊಂಡು ಅವರು ಸಹಕಾರ ನೀಡಲಿಲ್ಲ. ಇಲಾಖ ಸಿಬ್ಬಂದಿಗಳನ್ನು ಪಂಚಾಯಿತಿದಾರರಾಗಿ ನೇಮಿಸಿಕೊಂಡು ಸ್ಥಳದಲ್ಲಿ ಶೋಧನ ಸಮುಚಿತ ತಯಾರಿಸಿಕೊಂಡು ಅಂಗಶೋಧ ಮಾಡಿಕೊಂಡು ದ್ವಿಚಕ್ರ ವಾಹನ ಪರಿಶೀಲಿಸಲಾಗಿ ನೀಲಿ , ಕಪ್ಪುಬಣ್ಣದ ಬಜಾಜು ಡಿಸ್ಕವರಿ ವಾಹನ ಆಗಿದ್ದು ನೊಂದಣಿ ಕೆಎ **03** ಹೆಚಿ **4824** ಆಗಿರುತ್ತದೆ. ಚೀಲದ ಗಂಟು ತೆರೆದು ನೋಡಲಾಗಿ ಮದ್ಯದ ಟೆಟ್ರ

ಪ್ಯಾಕುಗಳು ಕಂಡುಬಂದವು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 90 ಮಿಲಿಯ 20 ಸಿಲ್ವರ್ ಕಪ್ ಸ್ಯಾಚೆಗಳು , 180 ಮಿಲಿ ಬ್ಯಾಗ್ ಪೈಪರ್ 10 , ಓಲ್ಡ್ ಅಡ್ಮಿರಲ್ 180 ಮಿಲ್ 15 , ಓಲ್ಡ್ ಟವರಿನ್ 180 ಮಿಲಿ 10 ಪ್ಯಾಕುಗಳು , ಹೈವರ್ಡ್ಸ್ ವಿಸ್ಕಿಯ 90 ಮಿಲಿ 96 ಪ್ಯಾಕೆಟುಗಳು ಮ್ಯಾಕ್ ಡೊವೆಲ್ 90 ಮಿಲಿ 10, ಪವರ ಕೂಲ್ 650 ಮಿಲಿ 12 ಬಿಯರ್ ಬಾಟಲುಗಳು ಕಂಡುಬಂದವು. ಹಾಗೂ ಸದರಿ ಆಸಾಮಿ ಯಾವುದೆ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯದ ಟೆಟ್ರಪ್ಯಾಕು ಇಟ್ಟುಕೊಂಡು ಹಣ ಸಂಪಾದನೆ ಮಾಡುತ್ತಿಆತನ ಹೆಸರು ವಿಳಾಸ ಕೇಳಲಾಗಿ ಮಹೇಶ ಬಿನ್ ನಾಗರಾಜು ಎಂದು ತಿಳಿಸಿರುತ್ತಾನೆ. ದೊರೆತ ಮದ್ಯದಲ್ಲಿ ಸಿಲ್ವರ್ ಕಪ್ 2 , ಬ್ಯಾಗ್ ಪೈಪರ್ 2 , ಒಲ್ಡ ಅಡ್ಮಿರಲ್ 2 ಹೈವರ್ಡ್ಸ್ ವಿಸ್ಕಿಯ 2, ಮ್ಯಾಕ್ ಡೊವಲೆ 2 , ಪವರ್ ಕೂಲ್ 2 ಇವುಗಳನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಕಳಿಸಿ ವರದಿ ಪಡೆಯುವ ಸಲುವಾಗಿ ಪ್ರತ್ಯೇಕವಾಗಿ ಒಂದು ಬಿಳಿಯ ಚೀಲ ಹಾಕಿ ಬಾಯಿಯನ್ನು ದಾರದಿಂದ ಕಟ್ಟಿ ಅರಗನ್ನು ಹಚ್ಚಿ 306 ಅಕ್ಷರದಿಂದ ಸೀಲು ಮಾಡಲಾಯಿತು. ಆತನನ್ನು ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ದಸ್ತಗಿರಿ ಮಾಡಲಾಯಿತು. ದೊರೆತ ದ್ವಿಚಕ್ರ ವಾಹನ , ಮುದ್ದೆ ಮಾಲು ಇಲಾಖ ವಶಕ್ಕೆ ವಶಪಡಿಸಿಕೊಳ್ಳಲಾಯಿತು. ಮಹಜರನ್ನು 3 ರಿಂದ 4.15 ಗಂಟೆವೆರೆಗೆ ಮಹಜರು ಕ್ರಮ ಜರುಗಿಸಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಆಸಾಮಿಯನ್ನು ಮತ್ತು ಮದ್ಯದ ಪ್ಯಾಕೆಟುಗಳನ್ನು ವಶಪಡಿಸಿಕೊಂಡಿರುತ್ತೇವೆ. ದಿಃ 3.10.2022 ರಂದು ದೊರೆತ ಮುದ್ದೆಮಾಲು , ದ್ವಿಚಕ್ರ ವಾಹನವನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲಾಯಿತು. ಸದರಿ ಮುದ್ದೆಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿರುತ್ತೇನೆ. ತದನಂತರ ಆರೋಪಿಗೆ ವಾಹನಕ್ಕೆ ಸಂಬಂಧಪಟ್ಟಂತೆ ನೋಟಿಸು ನೀಡಿರುತ್ತೇನೆ. ಎಫ್ ಎಸ್ ಎಲ್ ವರದಿ ನಾನೆ ತಂದಿರುತ್ತೇನೆ. ಆರೋಪಿಯನ್ನು , ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮಹಜರನ್ನು ಸಾಕ್ಷಿ ನೋಡಿಗುರುತಿಸಿದ್ದು ಅದು ನಿಪಿ 2 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು.

**ಪಾಟೀಸವಾಲು:-** ಆರೋಪಿ ಪರ ಶ್ರೀ ಡಿ ಎಂ ಎಸ್ ವಕೀಲರಿಂದ:

2. ಚಾಸ 1 ರವರ ಜೊತೆ ನಾನು ಸಹ ಜೊತೆಗೆ ಸಹಕರಿಸಲು ಹೋಗಿರುತ್ತೇನೆ. ಆರೋಪಿ ಪರ ವಕೀಲರು ಚಾಸ 1 ರವರಿಗೆ ಪಾಟೀ ಸವಾಲು ಮಾಡಿರುವುದನ್ನು ಪ್ರಾಸ 2 ರವರಿಗೆ ಅಳವಡಿಸಿಕೊಳ್ಳಲು ಕೋರಿಕೊಂಡ ಮೇರೆಗೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು..

3. ನಾನು ಹೇಳಿಕೆಯನ್ನು ಯಾವ ದಿನಾಂಕದಂದು ಕೊಟ್ಟಿರುತ್ತೇನೆ ನೆನಪಿಲ್ಲ ಆದರೆ ಅಬಕಾರಿ ನಿರೀಕ್ಷಕರು ಘಟಕ 2 ರವರಿಗೆ ನೀಡಿರುತ್ತೇನೆ. ಸದರಿಯವರ ಹೆಸರು ರಾಮ . ಕೆ ಹೇಳಿಕೆಯನ್ನು ನಾನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ಸಿಬ್ಬಂದಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೆ ಮಹಜರು ಬರೆದಿರುತ್ತೇನೆ. ಸದರಿ ವಿಷಯವನ್ನು ಹೇಳಿಕೆಯಲ್ಲಿ ಹೇಳಿರುತ್ತೇನೆ ಸದರಿವಿಷಯವನ್ನು ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮಾಲುಪಟ್ಟಿಯನ್ನು ನಾಗರಾಜು ಬರೆದಿರುತ್ತಾರೆ. ಆದರೆ ಮಾಲುಪಟ್ಟಿಯಲ್ಲಿ ಅವರೆ ಬರೆದಿರುತ್ತಾರೆ ಎಂದು ಬರೆದಿರುವುದಿಲ್ಲ. ಮಾಲುಪಟ್ಟಿಯನ್ನು ಜಪ್ತು ಜಾಗದಲ್ಲಿ ಬರೆದಿರುತ್ತೇವೆ. ಆದರೆ ಮಾಲುಪಟ್ಟಿಯಲ್ಲಿ ಆರೋಪಿ ಮನೆ ಮುಂದೆ ಬರೆದಿರುತ್ತದೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಎಲ್ಲ ಮದ್ಯದ ಪೌಚುಗಳನ್ನು ಎರಡೆರಡು ಪೌಚುಗಳನ್ನು ರಾಸಾಯನಿಕ ಪರಿಕ್ಷೆಗೆ ತೆಗೆದುಕೊಂಡಿರುತ್ತೇವೆ. ಬ್ಯಾಚು ನಂ. ಯಾವ ದಿನಾಂಕದಂದು ಮದ್ಯ ತಯಾರಾಗಿದೆ ಹಾಗೂ ರಾಸಾಯನಿಕ ಪರೀಕ್ಷೆಗೆ ಕಳಿಸಿರುತ್ತೇನೆ ಎಂದು ಹೇಳಿರುವುದಿಲ್ಲ. ನ್ಯಾಯಲಯದ ಮುಂದಿರುವ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ 180 ಎಂ ಎಲ್ ಇರುವುದಿಲ್ಲ. 180 ಎಂ ಎಲ್ ಇರುವುದಿಲ್ಲದ ಕಾರಣ ಮಹಜರನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಹೇಳಿಕೆಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ.